ಓ ಎಸ್ ನಂ. 24/2015
ಪಿ ಡಬ್ಲ್ಯು 1
ದಿನಾಂಕ 25-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ 4(ಎ) ಮತ್ತು (ಬಿ) ಪ್ರತಿವಾದಿ ಪರಃ ಶ್ರೀ ಕೆ ಎಲ್ ಡಿ ವಕೀಲರಿಂದಃ

ಅಮಲ್ಜಾರಿ ಅರ್ಜಿ ಸಂಖ್ಯೆ 11/2024 ರ ಪ್ರಕರಣದಲ್ಲಿ ವಿದ್ಯಾಶ್ರೀ ಎಂಬುವವರಿಗೆ ನ್ಯಾಯಾಲಯದಿಂದ ಬಂದಂತಹ ನೋಟೀಸು ಮತ್ತು ಅದಕ್ಕೆ ಲಗತ್ತಾಗಿರುವ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-79 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರಃ ಶ್ರೀ ಪಿ ಆರ್ ಸಿ ವಕೀಲರಿಂದಃ

ಅಮಲ್ಜಾರಿ ಅರ್ಜಿ ಸಂಖ್ಯೆ 11/2024 ರ ಪ್ರಕರಣದಲ್ಲಿ ನನ್ನನ್ನಾಗಲಿ ನನ್ನ ಮಕ್ಕಳನ್ನಾಗಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಅಮಲ್ಜಾರಿ ಅರ್ಜಿಯನ್ನು ನನ್ನ ಗಂಡನ ಮೊದಲನೇ ಹೆಂಡತಿ ಮಗಳು ಪಡೆದಿದ್ದ ಎಜುಕೇಷನ್ ಲೋನನ್ನು ಕಟ್ಟದೆ ಇರುವ ಕಾರಣ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-79 ರ ದಾಖಲೆಯನ್ನು ನ್ಯಾಯಾಲಯಕ್ಕೆ ಯಾವ ಉದ್ದೇಶಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ನನ್ನ ಗಂಡನ ಮೊದಲನೇ ಹೆಂಡತಿಯ ಮಗಳಾದ ವಿದ್ಯಾಶ್ರೀ ರವರನ್ನು ಎರಡನೇ ವಾದಿಯಾದ ಗೌರಮ್ಮರವರ ಮಗನಾದ ವಿಜಯ್ ರವರಿಗೆ ಕೊಟ್ಟು ಮದುವೆ ಮಾಡಲಾಗಿದ್ದು ಸದರಿ ಲೋನನ್ನು

ವಾದಿಗಳೇ ಕಟ್ಟಬೇಕು ಎಂದು ನುಡಿಯುತ್ತಾರೆ. ವಿದ್ಯಾಶ್ರೀ ರವರು ಪಡೆದಿರುವ ಎಜುಕೇಷನ್ ಲೋನನ್ನು ನಾನು ತೀರುವಳಿ ಮಾಡುವುದಾಗಿ ಒಪ್ಪಿರುತ್ತೇನೆ ಎಂದರೆ ಸರಿಯಲ್ಲ. ಕಡೂರಿನಲ್ಲಿರುವ ಸ್ವತ್ತುಗಳಿಂದ ಬರುವ ಬಾಡಿಗೆಯಿಂದ ಸದರಿ ಲೋನನ್ನು ಕಟ್ಟುತ್ತೇನೆಂದು ನಾನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಸಬಂದಪಟ್ಟಂತೆ ನನ್ನ ಗಂಡನ ಮೊದಲನೇ ಹೆಂಡತಿಗೆ ಸಂಬಂದಪಟ್ಟ ಒಂದು ಆಸ್ತಿಯನ್ನು ಗಿಪ್ಟ ಡೀಡ್ ಮಾಡಿಸಿಕೊಂಡು ಆ ಜಾಗದಲ್ಲಿ ಮನೆ ಕಟ್ಟಿರುತ್ತೇನೆ ಎಂದರೆ ಸಾಕ್ಷಿ ಸುಳುಂಳ ಎಂದು ನುಡಿಯುತ್ತಾರೆ. ಅಮಲ್ಜಾರಿ ಅರ್ಜಿ ಸಂಖ್ಯೆ 11/2024 ರ ಪ್ರಕರಣದಲ್ಲಿ ವಾದಿಗಳು ಪಕ್ಷಗಾರರ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಮಲ್ಜಾರಿ ಅರ್ಜಿ ಸಂಖ್ಯೆ 11/2024 ರ ಪ್ರಕರಣಕ್ಕೂ ವಾದಿಗಳಿಗೂ ಯಾವುದೇ ಹಕ್ಕು ಬಾದ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.